ನಂತರದ ಎರಡೂ ಫೋಟೊಗಳನ್ನು ಕಳಿಸಿಕೊಡಬೇಕು ಎಂಬೆಲ್ಲಾ ಒಪ್ಪಂದದ ಮೇರೆಗೆ ಗೇಟನ್ನು ಅಗಲ ಮಾಡಲು ಅನುಮತಿ ನೀಡಿದ ಮಾಲೀಕ.

ಗೇಟು ವಿಸ್ತರಣೆ ಕೆಲಸ ಶುರುಮಾಡಿದರೆ ಅಲ್ಲಿ ಮತ್ತೊಂದಿಷ್ಟು ಆಘಾತ ಕಾದಿತ್ತು. ಗೇಟಿನ ಕಂಬವನ್ನು ಸುಲಭದಲ್ಲಿ ಪಕ್ಕಕ್ಕೆ ಹಾಕುವಂತಿರಲಿಲ್ಲ. ಅಲ್ಲಿ ನೀರಿನ ಟಾಂಕಿಯಿತ್ತು. ಮತ್ತೂ ಅತ್ತ ಹೋದರೆ ಮನೆಯ ಪಾಯ ಅಡ್ಡ ಬರುತ್ತಿತ್ತು. ತಲೆ ಕೆಟ್ಟೇ ಹೋದಂತಾಯಿತು ಪ್ರದೀಪನಿಗೆ. ಹೇಗೆ ಮಾಡುವುದೆಂದು ಮೇಸ್ತ್ರಿಯೊಡನೆ ವಿಚಾರ ಮಾಡುತ್ತಿರುವ ನಡುವೆ, ತನ್ನ ಆಟಿಕೆಯ ಕಾರನ್ನು ತೆಗೆದುಕೊಂಡು ಬಂದು, 'ನೋಡು ಡ್ಯಾಡೀ, ನನ್ನ ಕಾರು ಆರಾಮಾಗಿ ಹೋಗುತ್ತೆ... ಡುರ್ರ್...' ಎಂದ ಮಗನನ್ನು ಹಿಂದೆಂದೂ ಇಲ್ಲದಂತೆ ಗದರಿಸಿದ್ದ ಆತ. ಅಂತೂ ಏನೇನೋ ಮಾಡಿ ಗೇಟನ್ನು ಆರಂಗುಲ ಅಗಲ ಮಾಡುವಷ್ಟರಲ್ಲಿ ಅರವತ್ತು ಸಾವಿರ ಕೈ ಬಿಟ್ಟು ಹೋಗಿತ್ತು.

ಅದೇ ಸಮಯಕ್ಕೆ ಸರಿಯಾಗಿ ಮಗನ ಶಾಲೆಯ ಡೊನೇಷನ್ನೂ ಕೊಡಬೇಕಾಗಿ ಬಂತು. ತಾನು ಕೆಲಸ ಮಾಡುತ್ತಿರುವ ಕಂಪನಿಯಲ್ಲಿ ಸಾಲ ಸಿಗಬಹುದೋ ಎಂದು ವಿಚಾರಿಸಿದ. 'ಮಾರ್ಕೆಟ್ ಚೆನ್ನಾಗಿಲ್ಲ. ಯಾರಿಗೆ ಯಾವಾಗ ಗೇಟ್‌ಪಾಸ್ ಕೊಡ್ತಾರೋ ಗೊತ್ತಿಲ್ಲ. ಹೀಗಿರುವಾಗ ಸಾಲ ಕೊಡುವ ಮಾತೇ ಇಲ್ಲ' ಎಂದ ಎಚ್.ಆರ್. ಮುಖ್ಯಸ್ಥ. ಹೌಹಾರಿಹೋದ ಪ್ರದೀಪ ನೌಕರಿ ಖಾತ್ರಿಯ ಬಗ್ಗೆ ಹೆಚ್ಚಿಗೆ ವಿಚಾರಿಸತೊಡಗಿದಾಗ, 'ಈಗ ಮೊದಲಿನಂತೆ ಬೆಂಚ್ ಅನ್ನೋದೆಲ್ಲಾ ಇಲ್ಲ. ಎಲ್ಲರ ಕುರ್ಚಿಗಳೂ ಬೆಂಚುಗಳೇ, ನನ್ನದೂ ಸೇರಿ' ಎನ್ನುವ ಉತ್ತರ ಬಂತು. ಗೇಟು ವಿಸ್ತರಣೆ ಬಿಟ್ಟು ಮಿಕ್ಕಿದ್ದಕ್ಕೆಲ್ಲಾ ಮಾಡಿದ ಸಾಲಗಳು ನೆನಪಾದವು.

★★★

ಪ್ರದೀಪನಿರುವ ಡಬಲ್ ಬೆಡ್‌ರೂಮ್ ಮನೆಯ ಒಂದು ಕೋಣೆಯನ್ನು ಮಾಲೀಕನೇ ಉಳಿಸಿಕೊಂಡಿದ್ದ. ಅಲ್ಲೊಂದಿಷ್ಟು ಸಾಮಾನುಗಳನ್ನು ತುಂಬಿಟ್ಟಿದ್ದ. ಅಲ್ಲದೇ ತಾನು ಒಂದೆರಡು ದಿನಗಳ ಮಟ್ಟಿಗೆ ಭಾರತಕ್ಕೆ ಬಂದಾಗ ಉಳಿದುಕೊಳ್ಳಲು ಅನುಕೂಲವಾಗುವಂತೆ ಕಾಟು ಕಪಾಟುಗಳನ್ನೂ ಇಟ್ಟುಕೊಂಡಿದ್ದ. ಕೋಣೆಯ ಬೀಗದ ಕೈ ಪ್ರದೀಪನ ಹತ್ತಿರವೇ ಇತ್ತು. ಆಗಾಗ ಕೋಣೆಯನ್ನು ತೆರೆದು ಸ್ವಚ್ಛಗೊಳಿಸುತ್ತಿರಬೇಕು ಎನ್ನುವ ಮಾತೂ ಕರಾರಿನಲ್ಲಿತ್ತು.

ಹೀಗೊಮ್ಮೆ ಪ್ರದೀಪ ಆ ಕೋಣೆಯನ್ನು ಹೊಕ್ಕಾಗ ಗೋಡೆಯೊಂದರಲ್ಲಿ ಬಿರುಕು ಬಿಟ್ಟಿರುವುದು ಕಂಡು ಕಂಗಾಲಾದ. ಎದುರಿಗೇ ಕಣ್ಣಿಗೆ ಕಾಣುವಂತೆ ಸುಮಾರು ದೊಡ್ಡದಾಗೇ ಇದ್ದ ಬಿರುಕನ್ನು ಮೊದಲೆಂದೂ ನೋಡಿರಲಿಲ್ಲ ಆತ. ಹೆಂಡತಿಯನ್ನೂ ಕರೆದು ತೋರಿಸಿದ. ಆಕೆಯೂ ಅದು ಇತ್ತೀಚೆಗೇ ಆಗಿರಬಹುದೆಂದಳು. ಹಾಗೇ ಬಿಡುವುದು ಬೇಡವೆಂದು ಕಟ್ಟಡದ ಅನುಭವವಿರುವ ಗೆಳೆಯನೊಬ್ಬನನ್ನು ಕರೆದು ತೋರಿಸಿದ.

ಗೆಳೆಯ ಸೂಕ್ಷ್ಮವಾಗಿ ಪರಿಶೀಲಿಸಿ, ಅದು ಗೇಟನ್ನು ಅಗಲಿಸುವ ಸಂದರ್ಭದಲ್ಲಿಯೇ ಮೂಡಿದ ಬಿರುಕು ಎಂದು ಖಚಿತವಾಗಿ ಹೇಳಿದ. ಇದು ಗೋಡೆಯ ಮೇಲ್ಮೈಗೆ ಆಗಿರುವ ಬಿರುಕೋ ಅಥವಾ ತಳಪಾಯದ ಕುಸಿತದಿಂದಾಗಿರುವುದೋ ಎಂಬುದನ್ನು ಮೊದಲು ಕಂಡುಹಿಡಿಯಬೇಕೆಂದೂ; ಗೋಡೆಯಮೇಲೆ ಆಗಿದ್ದರೆ ಅಷ್ಟೇನೂ ತೊಂದರೆಯಿಲ್ಲ, ಒಂದುವೇಳೆ ಫೌಂಡೆಶನ್ನಿನಲ್ಲೇ ಆಗಿದ್ದರೆ ಭಾರೀ ಫಜೀತಿ ಎಂಬುದಾಗಿ ಹೇಳಿದ. ಅದನ್ನು ತಿಳಿಯಲು ಒಂದು ಉಪಾಯವನ್ನೂ ಸೂಚಿಸಿದ. ಮೊಳೆಯೊಂದನ್ನು ಬಿರುಕಿನೊಳಗೆ ತೂರಿಸಿ ಇಟ್ಟು ಆಗಾಗ ಅದನ್ನು ಗಮನಿಸುತ್ತಿರಬೇಕು. ಮೊಳೆ ಕೆಳಕ್ಕೆ ಬಿತ್ತೆಂದರೆ ಬಿರುಕು